<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>
<u>ಸಿ.ಸಿ.**1646/2023**</u>

| | | |
|---|---|---|
| ಸಾಕ್ಷಿದಾರರ ಹೆಸರು | : ಸುಮ | ಫ್ರಾಸಾ -1 |
| ಗಂಡನ ಹೆಸರು | : ಹೆಚ್.ಕೆ.ಗಿರೀಶ್ | ಚಾಸಾ-1 |
| ವಯಸ್ಸು | : 42 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ24.01.2025 |
| ವಾಸಸ್ಥಳ | : ಹಾಲೂರು, ಗೋಣೀಬೀಡು. | |

<u>:ಮುಖ್ಯ ವಿಚಾರಣೆ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:</u>

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇದೆ. ಅವರು ನನ್ನ ನಾದಿನಿಯ ಗಂಡ. ಚಾಸಾ-2 ರಿಂದ 4 ರವರ ಪರಿಚಯ ನನಗಿದೆ.

ದಿ.13.03.2022 ರಂದು ರಾ.8.00 ಗಂಟೆಗೆ ನಾನು ನನ್ನ ಮನೆಯ ಹಾಲ್ ನಲ್ಲಿ ಕುಳಿತಿದ್ದೆ. ಆಗ ನನ್ನ ಮೈದುನಾದ 3 ನೇ ಆರೋಪಿ, ನನ್ನ ನಾದಿಯಾದ 2 ನೇ ಆರೋಪಿ ಮತ್ತು ಅವರ ಗಂಡ 1 ನೇ ಆರೋಪಿ ಇರವರೆಲ್ಲರೂ ನಮ್ಮ ಮನೆಗೆ ಬಂದು ಹಿಂದೆಯಿಂದ ಬಂದು 2 ನೇ ಆರೋಪಿ ನನ್ನ ಜುಟ್ಟನ್ನು ಹಿಡಿದು ಎಳೆದಿದ್ದು ಆಗ 3 ನೇ ಆರೋಪಿ ನನ್ನ ಎಡಗೈಯನ್ನು ತಿರುಚಿ ನನ್ನ ಎಡಕನ್ನಗೆ ಹೊಡೆದರು. ಆ ಸಮಯಕ್ಕೆ 1 ನೇ ಆರೋಪಿ ಕತ್ತಿಯನ್ನು ತಂದು ನನ್ನನ್ನು ಕಡಿಯಲು ಬಂದಾಗ ನಾನು ನನ್ನ ಎಡಗೈಯನ್ನು ಅಡ್ಡ ಕೊಟ್ಟಾಗ ಮಧ್ಯದ ಬೆರಳಿಗೆ ಪೆಟ್ಟಾಯಿತು. ನನ್ನ ಬಲಗೈ ಹೆಬ್ಬೆಟ್ಟಿಗೂ ಸಹಾ ಪೆಟ್ಟಾಯಿತು. ನನಗೆ ಗಂಡ ಮಕ್ಕಳು ಇಲ್ಲದ ಕಾರಣ ಅವರೆಲ್ಲರೂ ನನಗೆ ಆಶ್ರಯ ಕೊಡುವುದಿಲ್ಲ ಎಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು ಅಸಭ್ಯವಾಗಿ ನಿಂದಿಸಿ ಮನೆಯಿಂದ ಹೊರಗೆ ಹೋಗು ಎಂದು ಈ ರೀತಿ ಮಾಡಿದ್ದಾರೆ. 1 ನೇ ಆರೋಪಿ ಕತ್ತಿಯನ್ನು ತೋರಿಸಿ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಸಹಾ ಹಾಕಿದ್ದಾರೆ. ನಾನು ಕಿರುಚುತ್ತಾ ಮನೆಯ ಹೊರಗೆ ಬಂದಾಗ ಚಾಸಾ-2 ರಿಂದ 4 ರವರು ನನ್ನನ್ನು ಕರೆದುಕೊಂಡು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಕೊಡಿಸಿದ್ದಾರೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಮ.ರಾ.12.00 ಗಂಟೆ ಸಮಯಕ್ಕೆ ನನ್ನ ಹೇಳಿಕೆ ಪಡೆದಿದ್ದಾರೆ.

ದಿ.16.03.2022 ರಂದು ಗೋಣೀಬೀಡ ಪೋಲಿಸರು ನನ್ನ ಮನೆಗೆ ಬಂದು ಮಹಜರ್ ಮಾಡಿದ್ದು, ಕತ್ತಿಯನ್ನು ಹಾಜರುಪಡಿಸಿದ್ದೇನೆ. ಪೋಲಿಸರು ಸ್ಥಳ ಪರಿಶೀಲನೆ ಮಾಡಿ ನನ್ನ ಸಹಿ ಪಡೆದಿದ್ದಾರೆ. ದಿ.20.04.2022 ರಂದು ನಾನು ನ್ಯಾಯಾಲಯಕ್ಕೆ ಬಂದು ನ್ಯಾಯಾಧೀಶರ ಮುಂದೆ ಬಂದು ಹೇಳಿಕೆ ದಾಖಲಿಸಿಕೊಂಡಿರುತ್ತೇನೆ.

ಸಾಕ್ಷಿಯು ದಿ.14.03.2021 ರ ಹೇಳಿಕೆ, ದಿ.16.03.2022 ರ ಮಹಜರ್ ನಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ಎರಡು ಪೋಟೋಗಳನ್ನು ನೋಡಿ ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ. ಹೇಳಿಕಯನ್ನು ನಿಪಿ-1, ಮಹಜರ್ ನ್ನು ನಿಪಿ-2, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ),

ಪೋಟೋಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಕತ್ತಿಯನ್ನು ನೋಡಿ 1 ನೇ ಆರೋಪಿ ಉಪಯೋಗಿಸಿದ್ದ ಕತ್ತಿ ಇದೆ ಎಂದು ಗುರುತಿಸಿದ್ದು, ಸದರಿ ಕತ್ತಿಯನ್ನು ಎಂ.ಒ.1, ಕತ್ತಿ ಇದ್ದ ಬಿಳಿ ಬಣ್ಣದ ಬಟ್ಟೆಯನ್ನು ಎಂ.ಒ.2, ಎಂ.ಒ.2 ರ ಮೇಲಿನ ಸಾಕ್ಷಿಯ ಸಹಿಯನ್ನು ಎಂ.ಒ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು, 2 ಮತ್ತು 3 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

<u>ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:</u>

ಆಸ್ತಿ ವಿಚಾರಕ್ಕೆ ಸಂಬಧಪಟ್ಟಂತೆ 1 ರಿಂದ 3 ನೇ ಆರೋಪಿತರೆಲ್ಲರೂ ಜೀವ ಬೆದರಿಕೆ ಹಾಕಿದ್ದಾರೆ ಎಂದರೆ ಸರಿ.

<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ</u>

ಚಾಸಾ-2 ರಿಂದ 6 ರವರು ನಮ್ಮ ಸಂಬಂಧಿಕರು ಎಂದರೆ ಸರಿ. ನಾನು ಈ ದಿನ ನನ್ನ ಕೈಯ ಮೇಲೆ ವಿಚಾರಗಳನ್ನು ಬರೆದುಕೊಂಡು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. (ಈ ಹಂತದಲ್ಲಿ ಸಾಕ್ಷಿಯ ಎಡಗೈ ಹಸ್ತವನ್ನು ನೋಡಿದಾಗ ಅಲ್ಲಿ ದಿನಾಂಕಗಳನ್ನು ಬರೆದುಕೊಂಡಿರುತ್ತಾರೆ). ನನ್ನ ಅತ್ತೆ ಮತ್ತು 2 ನೇ ಆರೋಪಿ 1 ನೇ ಆರೋಪಿಯೊಂದಿಗೆ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಕಳೆದ 2 ತಿಂಗಳ ಹಿಂದೆ ಬೆಂಗಳೂರಿಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. 2 ತಿಂಗಳ ಮುನ್ನ ಆರೋಪಿತರು ನನ್ನ ಮನೆಯ ಮತ್ತೊಂದು ಭಾಗದಲ್ಲಿ ವಾಸವಿದ್ದರು. ಆ ಸಮಯಕ್ಕೆ ನಾನು ಪ್ರತ್ಯೇಕ ಅಡಿಗೆ ಮಾಡಿಕೊಳ್ಳುತ್ತಿದ್ದೆ ಎಂದರೆ ಸರಿ, ಆದರೆ ಆರೋಪಿತರ ಮೇಲೆ ನನಗೆ ದ್ವೇಷ ಇರಲಿಲ್ಲ. ನಾನು ವಾಸವಿರುವ ಮನೆಯ ಸ.ನಂ. ನನಗೆ ಗೊತ್ತಿಲ್ಲ. ನನ್ನ ಮನೆಯ ವಿಸ್ತೀರ್ಣ ಹೇಳಲು ಆಗುವುದಿಲ್ಲ. ಮನೆಯ ವಿಸ್ತೀರ್ಣವನ್ನು ಮಹಜರ್ ನಲ್ಲಿ ಬರೆಯಲಾಗಿದೆಯಾ ಎಂದು ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ-1 ರಲ್ಲಿರುವ ವಿಚಾರದ ಮಾಹಿತಿ ನಿಮಗಿಲ್ಲ ಎಂದರೆ ಸಾಕ್ಷಿಯು ಪೋಲಿಸರು ಓದಿ ಹೇಳಿದ್ದಾರೆ ಎಂದು ನುಡಿಯುತ್ತಾರೆ.

ದೂರನ್ನು ಬರೆದುಕೊಂಡ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. 2022 ನೇ ಇಸವಿಯಲ್ಲಿ ನಮ್ಮ ಕುಟುಂಬದ ಜಮೀನು ನನ್ನ ಅತೆಯ ಹೆಸರಿನಲ್ಲಿ ಇತ್ತು. ಜೋಗಣ್ಣನಕೆರೆ ಗ್ರಾಮದ ಸ.ನಂ.33/1 ಎ ಜಮೀನನ್ನು ನನ್ನ ಗಂಡ, ಅತ್ತೆ ಮತ್ತು ಅವರ ಸಹೋದರರು ಸೇರಿ ಸುಶೀಲಾ ಜೀವಾಳ ಎನ್ನುವವರಿಗೆ ದಿ.26.04.2011 ರಂದು ರೂ.2,61,000/- ಕ್ಕೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ನನ್ನ ಮದುವೆ ಕಾಲಕ್ಕೆ ಮಾರಾಟವಾಗಿದ್ದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿ ನನ್ನ ,

ರಘು ಮತ್ತು ಅನಿತಾ ರವರ ವಿರುದ್ಧ ಸಿವಿಲ್ ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಈ ನ್ಯಾಯಾಲಯದಲ್ಲಿ ಅ.ದಾ.7/2024 ರಂತೆ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಹಾಗೂ ಇತರರ ವಿರುದ್ಧ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅ.ದಾ.ಸಂ.71/2023 ರಂತೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ದಿ.13.03.2022 ರಂದು ಆರೋಪಿತರು ನನ್ನ ಮನೆಯ ಪಕ್ಕದ ಮನೆಯಲ್ಲಿ ವಾಸವಿದ್ದರು. ಆ ದಿನ ನನ್ನ ಮನೆಯಲ್ಲಿ ನಾನೊಬ್ಬಳೇ ಇದ್ದೆ.

ದಿ.13.03.2022 ರಂದು ನನ್ನ ಅತ್ತೆಯೂ ಸಹಾ ನನ್ನೊಂದಿಗೆ ವಾಸವಿದ್ದರು. ಜಗಳದ ಸಮಯಕ್ಕೆ ನನ್ನ ಅತ್ತೆ ರೂಮ್ ನಲ್ಲಿ ಇದ್ದರು. ಚಾಸಾ-3 ರವರ ಮನೆ ನನ್ನ ಮನೆಯ ಪಕ್ಕದಲ್ಲಿ ಇದೆ. ನನ್ನ ಹಾಗೂ ಚಾಸಾ-2 ರವರ ಮನೆಯ ನಡುವೆ ಸುಮಾರು ಅರ್ಧ ಕಿ.ಮೀ ಅಂತರ ಇದೆ. ಎಂ.ಒ.1 ನನ್ನ ಮನೆಯಲ್ಲಿ ಇದ್ದ ಕತ್ತಿ ಎಂದರೆ ಸರಿಯಲ್ಲ. ನಾನು ಧರಿಸಿದ್ದ ಬಟ್ಟೆಯ ಮೇಲೆ ರಕ್ತ ಬಿದ್ದಿರಲಿಲ್ಲ. 1 ನೇ ಆರೋಪಿ ಆಗಾಗ ನನ್ನೊಂದಿಗೆ ಗಲಾಟೆ ಮಾಡುತ್ತಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಕೊಂಡಿಲ್ಲ. 3 ನೇ ಆರೋಪಿ ಮಾನಸಿಕವಾಗಿ ಅಸ್ವಸ್ಥರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಅವರಿಗೆ ಆರೋಗ್ಯ ಸರಿಯಿಲ್ಲ ಕಾರಣ ಮಾತ್ರೆ ತೆಗೆದುಕೊಳ್ಳುತ್ತಿರುವುದಾಗಿ ನುಡಿಯುತ್ತಾರೆ. ನನ್ನ ಅತ್ತೆ ಶೇಷಮ್ಮ ರವರಿಗೆ ಸುಮಾರು 72 ವರ್ಷ ವಯಸ್ಸಿರಬಹುದು. ನನ್ನ ಅತ್ತೆಯನ್ನು ಉಪಚರಿಸಲಾಗದೇ ಅವರನ್ನು ಮನೆಯನ್ನು ಹೊರಗೆ ಹಾಕಲು ಪ್ರಯತ್ನಿಸುತ್ತಿದ್ದೆ ಎಂದರೆ ಸರಿಯಲ್ಲ. ಈ ವಿಚಾವಾಗಿ 1 ನೇ ಆರೋಪಿ ನನ್ನನ್ನು ಕೇಳಿದ್ದಕ್ಕೆ ನಾನು, ಚಾಸಾ-2 ಮತ್ತು 3 ರವರು 1 ನೇ ಆರೋಪಿಯ ಮೇಲೆ ಜಗಳ ಮಾಡಿ ಹಲ್ಲೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ 1 ನೇ ಆರೋಪಿಯು ನನ್ನ ಹಾಗೂ ಚಾಸಾ-2 ಮತ್ತು 3 ರವರ ವಿರುದ್ಧ ಗೋಣೀಬೀಡು ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

ನನ್ನನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅದು ಯಾರ ಆಟೋ ಎಂದು ನನಗೆ ಗೊತ್ತಿಲ್ಲ ಆದರೆ ಅದು ಬಾಡಿಗೆ ಆಟೋ. ನಾನು ಹೇಳಿದ ದಿನಾಂಕದಂದು ಮನೆಯಿಂದ ಆಸ್ಪತ್ರೆಗೆ ಹೋಗುವಾಗ ರಾ.10.00 ಗಂಟೆಯಾಗಿತ್ತು. ರಾ.10.30 ರಷ್ಟರಲ್ಲಿ ನಾವು ಆಸ್ಪತ್ರೆಗೆ ತಲುಪಿದ್ದೆವು. ದಿ.13.03.2022 ರಂದು 1 ನೇ ಆರೋಪಿಯೂ ಸಹಾ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದರು ಎಂದರೆ ಸರಿಯಲ್ಲ. ನನ್ನ ಅತ್ತೆ ಶೇಷಮ್ಮ ಹೆಸರಿನಲ್ಲಿ ಇರುವ ಆಸ್ತಿಯನ್ನು ಕಬಳಿಸಲು ನಾನು ಉನ್ನಾರ ನಡೆಸುತ್ತಿದ್ದೆ ಎಂದರೆ ಸರಿಯಲ್ಲ. ಶೇಷಮ್ಮ ರವರ ಜಮೀನನ್ನು ದಿ.30.09.2023 ರಂದು 1 ನೇ ಆರೋಪಿಯು ರೂ.64,00,000/- ಕ್ಕೆ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ನನ್ನನ್ನು ಯಾರು ಕೇಳಿಲ್ಲ ಹಾಗೂ ನನ್ನ ಸಹಿಯನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. ಸ.ನಂ.33/1 ಎ ಜಮೀನನ್ನು ಮಾರಾಟ ಮಾಡಿದ ಬಾಬ್ತು ನನಗೆ ಹಣ ಕೊಟ್ಟಿರುವ ಕಾರಣ 1 ನೇ ಆರೋಪಿ ಕ್ರಯಕ್ಕೆ ಪಡೆದ ವಿಚಾರವಾಗಿ ನನಗೆ ಹಣ ಕೊಟ್ಟಿಲ್ಲ ಎಂದರೆ ಸಾಕ್ಷಿಯು ನನಗೆ ಎಂದಿಗೂ ಸಹಾ ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿ ಪಡೆದಿರು ವ ಕ್ರಯಪತ್ರಕ್ಕೆ 2 ಮತ್ತು 3 ನೇ ಆರೋಪಿತರು ಸಹಿ ಮಾಡಿ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

1 ನೇ ಆರೋಪಿ ಕ್ರಯಕ್ಕೆ ಪಡೆದಿರುವ ಜಮೀನಿನ ಮೇಲೆ ಇದ್ದ ರೂ.1 ಲಕ್ಷ ಸಾಲವನ್ನು 1 ನೇ ಆರೋಪಿಯೇ ಮರುಪಾವತಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ನಾನು 2 ದಿನಗಳ ಕಾಲ ಇದ್ದೆ. ಮಹಜರ್ ಗೆ ಬರುತ್ತೇವೆ ಎಂದು ಪೋಲಿಸರು ನನಗೆ ಪೋನ್ ಮಾಡಿದ್ದು ನೋಟೀಸು ಕೊಟ್ಟಿರಲಿಲ್ಲ. ದಿ.14.03.2022 ರಂದೇ ಪೋಲಿಸರು ನನಗೆ ಕರೆ ಮಾಡಿದ್ದು ಅವರು ದಿ.16.03.2022 ರಂದು ಸ್ಥಳಕ್ಕೆ ಬಂದರು. ಚಾಸಾ-5 ಮತ್ತು 6 ರವರನ್ನು ಪೋಲಿಸರೇ ಕರೆಸಿದ್ದರು. ಅವರಿಬ್ಬರು ಪೋಲಿಸರು ಬಂದ ನಂತರ ಸ್ಥಳಕ್ಕೆ ಬಂದರು. ಪೋಲಿಸರು ಬೆ.11.00 ಗಂಟೆಗೆ ಬಂದಿದ್ದು ಚಾಸಾ-5 ಮತ್ತು 6 ರವರು ಮ.12.00 ಗಂಟೆಗೆ ಬಂದಿದ್ದರು. ಪೋಲಿಸರು ಸ್ಥಳಕ್ಕೆ ಬಂದಿದ್ದಾಗ ನಾನು ಮನೆಯಲ್ಲಿಯೇ ಇದ್ದೆ. ಮಹಜರ್ ನಲ್ಲಿ ಯಾವ ಚೆಕ್ಕುಬಂದಿ ಬರೆದಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಮಹಜರ್ ನ್ನು 5 ಪುಟಗಳಲ್ಲಿ ಬರೆದಿದ್ದಾರೆ. ಮಹಜರ್ ನ ಎರಡು ಪುಟಗಳಿಗೆ ಮಾತ್ರ ನನ್ನ ಸಹಿಗಳನ್ನು ಪಡೆಯಲಾಗಿದೆ. ಮಹಜರ್ ನ್ನು ಪೋಲಿಸರೇ ಬರೆದಿದ್ದಾರೆ. ಮಹಜರ್ ನ್ನು ಮನೆಯ ಒಳಗೆ ಹಾಗೂ ಹೊರಗೆ ಎರಡೂ ಕಡೆ ಬರೆದಿದ್ದಾರೆ. ಸ್ಥಳದಲ್ಲಿ ಒಟ್ಟು ಎರಡು ಪೋಟೋ ತೆಗೆದಿದ್ದು, ಮನೆಯ ಒಳಗೆ ಒಂದು ಪೋಟೋ ಹಾಗೂ ಮನೆಯ ಹೊರೆಗೆ ಒಂದದು ಪೋಟೋ ತೆಗೆದಿದ್ದಾರೆ. ಪೋಟೋವನ್ನು ಪೋಲಿಸರು ಮೊಬೈಲ್ ಕ್ಯಾಮೇರಾದಲ್ಲಿ ತೆಗೆದಿದ್ದಾರೆ.

ಕತ್ತಿ ನನ್ನ ಮನೆಯ ಒಳಗೆ ಕಿಟಕಿ ಹತ್ತಿರ ಬಿದ್ದಿದ್ದನ್ನು ನಾನು ಪೋಲಿಸರಿಗೆ ಕೊಟ್ಟಿದ್ದೇನೆ. ಎಂ.ಒ.1 ರಂತಹ ಕತ್ತಿಯನ್ನು ಮನೆ ಹಾಗೂ ತೋಟದ ಉಪಯೋಗಕ್ಕೆ ಬಳಸುತ್ತಾರೆ ಎಂದರೆ ಸರಿ. ನನ್ನ ಮನೆಯಲ್ಲಿ ಇದ್ದ ಕತ್ತಿಯನ್ನೇ ಪ್ರಕರಣಕ್ಕೋಸ್ಕರ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಕತ್ತಿಯ ಮೇಲೆ ರಕ್ತದ ಕಲೆ ಇತ್ತ ಎಂದು ನನಗೆ ಗೊತ್ತಿಲ್ಲ. ನನ್ನ ಮನೆಯಲ್ಲಿ ರಕ್ತದ ಕಲೆ ಬಿದಿತ್ತ ಎಂದು ನಾನು ನೋಡಿಲ್ಲ. ನಾನು ಹೇಳಿದಂತೆ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿತರ ನಡುವಿನ ಸಿವಿಲ್ ವ್ಯಾಜ್ಯಕ್ಕ ಪೂರಕವಾಗಲೆಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ಹಾಗೂ ಪೋಲಿಸರು ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಎಂ.ಒ.1 ಕ್ಕೂ, ಪ್ರಕರಣಕ್ಕೂ, ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.